## 36. ಸ.ಹಿ.ಪ್ರಾ ಶಾಲೆ ಮಸಗಲ್ಲಿ ಶಾಲೆ

ಸ.ಹಿ.ಪ್ರಾ ಶಾಲೆ ಮಸಗಲ್ಲಿ ಶಾಲೆಯು ಹೊಸನಗರ ತಾಲೂಕಿನಲ್ಲಿದೆ. 5 ಶಿಕ್ಷಕರನ್ನೊಳಗೊಂಡಂತೆ 63 ಮಕ್ಕಳಿದ್ದಾರೆ. ಮಲೆನಾಡಿನ ಪ್ರಕೃತಿ ಮಡಿಲಿನಲ್ಲಿರುವ 1962ನೇ ಇಸವಿಯಲ್ಲಿ ಪ್ರಾರಂಭವಾದ ನಮ್ಮ ಶಾಲೆ ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನ ಮಸಗಲ್ಲಿ ಗ್ರಾಮದಲ್ಲಿದೆ. ಮೂಲಭೂತ ಸೌಕರ್ಯಗಳ ಕೊರತೆಯ ನಡುವೆಯು, ಶಿಕ್ಷಕರ, ಎಸ್.ಡಿ.ಎಂ.ಸಿ, ಪೋಷಕರ ಪ್ರಯತ್ನದಿಂದ ತಾಲ್ಲೂಕಿನಲ್ಲಿ ಉತ್ತಮ ಶಾಲೆ ಪ್ರಶಸ್ತಿಯನ್ನು ಪಡೆದುಕೊಂಡಿದೆ

### ಶಾಲೆಯಲ್ಲಿ ಕೈಗೊಂಡ ನಾವಿನ್ಯಯುತ ಚಟುವಟಿಕೆಗಳು:–

1. ಸುಂದರವಾದ ಹೂ ತೋಟ ನಿರ್ಮಾಣ
2. ಜೋಕಾಲಿ ಮತ್ತು ಜಾರುಬಂಡಿ
3. ತೆರೆದ ಗ್ರಂಥಾಲಯ
4. ಮಕ್ಕಳಿಂದಲೆ ಶಾಲಾ ಸಾಂಸ್ಕೃತಿಕ ಕಾರ್ಯಕ್ರಮಗಳ ನಿರ್ವಹಣೆ
5. ಸುಸಜ್ಜಿತ ನಲಿ–ಕಲಿ ಕೊಠಡಿ
6. ಪ್ರಾರ್ಥನಾ ವೇಳೆಯಲ್ಲಿ ದಿನಕ್ಕೊಂದು ರಸಪ್ರಶ್ನೆ
7. ಸ್ವಚ್ಛತೆ ಶಾಲಾ ಆವರಣ, ಕೊಠಡಿಗಳು, ಶೌಚಾಲಯ

### ಆರಂಭದಲ್ಲಿ ತಾವು ಎದುರಿಸಿದ ಸಮಸ್ಯೆಗಳು:–

1. ಹಣಕಾಸಿನ ಕೊರತೆ
2. ನೀರಿನ ಕೊರತೆ
3. ಕೊಠಡಿಗಳ ದುರಸ್ಥಿ
4. ಪೀಠೋಪಕರಣಗಳ ಕೊರತೆ
5. ಪೋಷಕರಿಗೆ ಶಾಲೆಯ ಬಗ್ಗೆ ಆಸಕ್ತಿ ಇಲ್ಲದಿರುವುದು
6. ಶೌಚಾಲಯ ಇಲ್ಲದಿರುವುದು
7. ಶಾಲೆಗೆ ಕಾಂಪೌಂಡ್ ಇಲ್ಲದಿರುವುದು
8. ಎಸ.ಡಿ.ಎಂ.ಸಿ ಯವರಿಗೆ ಎಸ್.ಎಸ್.ಎ ಅನುದಾನಗಳ ಮಾಹಿತಿ ಇರದಿರುವುದು

### ಪರಿಹಾರಕ್ಕೆ ಕೈಗೊಂಡ ಕ್ರಮ:–

ಅನುದಾನಗಳನ್ನು ಸಮರ್ಪಕವಾಗಿ ಬಳಸುವ ಬಗ್ಗೆ ಎಸ್.ಡಿ.ಎಂ.ಸಿ/ಪೋಷಕರಿಗೆ ಅರಿವು ಮೂಡಿಸಲಾಯಿತು. ಹೆಣ್ಣು ಮಕ್ಕಳ ಶೌಚಾಲಯ ಮಾಡಲಾಯಿತು. ದಾನಿಗಳ ಮನೆ ಬೇಟಿ ಮಾಡಿ ತೆರೆದ ಗ್ರಂಥಾಲಯ ಮಾಡಲಾಯಿತು, ಶಾಲೆ ಶೈಕ್ಷಣಿಕ ಮತ್ತು ಭೌತಿಕ ಅಭಿವೃದ್ಧಿಯ ಬಗ್ಗೆ ಎಸ್.ಡಿ.ಎಂ.ಸಿ, ಪೋಷಕರು, ಶಿಕ್ಷಕರು ಮತ್ತು ಜನ ಪ್ರತಿನಿಧಿಗಳ ಸಭೆ ಕರೆದು ಚರ್ಚಿಸಿ ಮನವೊಲಿಸಲಾಯಿತು. ಇದಕ್ಕಾಗಿ ಎಸ್.ಡಿ.ಎಂ.ಸಿ ಯವರು, ಪೋಷಕರು, ಹಳೇ ವಿದ್ಯಾರ್ಥಿಗಳು, ಶಿಕ್ಷಣಾಸಕ್ತರು, ಗ್ರಾಮಸ್ಥರು, ಜನಪ್ರತಿನಿಧಿಗಳು, ಶಿಕ್ಷಕರು, ವಿದ್ಯಾರ್ಥಿ/ವಿದ್ಯಾರ್ಥಿನಿಯರು ಕೈ ಜೋಡಿಸಿ ದಾನ ರೂಪದಲ್ಲಿ ಹಣ ಸಂಗ್ರಹಿಸಿ ಅಭಿವೃದ್ಧಿಪಡಿಸಲಾಯಿತು.

1) 2018–19 ನೇ ಸಾಲಿನಲ್ಲಿ ಶಾಲಾ ಮಕ್ಕಳ ಕಲಿಕೆಗೆ ಅನುಕೂಲವಾಗಲು ಕಂಪ್ಯೂಟರ್ ಖರೀದಿಸಬೇಕೆಂಬ ಯೋಚನೆ ಇದೆ 2) ಗ್ರಾಮ ಪಂಚಾಯಿತಿ ಸಹಾಯ ಪಡೆದು ಶಾಲಾ ಹೂ ತೋಟ ಮತ್ತು ಔಷಧಿ

ವನ ನಿರ್ಮಾಣಕ್ಕೆ ನೀರಿನ ವೈವಸ್ಥೆ 3) ಇಲಾಖೆಯಿಂದ ಹೊಸ 2 ಕೊಠಡಿಗಳಿಗೆ ಬೇಡಿಕೆ ಇಟ್ಟಿದ್ದೇವೆ 4) ಮೇಲ್ಛಾವಣಿ ರಿಪೇರಿಗೆ ಅನುದಾನ ಕೋರಲಾಗಿದೆ.

















